ಕತೆ

ಎಸ್. ನಟರಾಜ ಬೂದಾಳು

# ರಂಗೋಲಿ



ಚಿತ್ರಗಳು: ಎಸ್.ವಿ. ಹೂಗಾರ

ರಾಮಾಜೋಯಿಸರು ತಮ್ಮ ಎಲ್ಲಾ ಸಿಟ್ಟನ್ನೂ ಏಕತ್ರ ಮಾಡಿಕೊಂಡು ಒಂದೇ ಸಮನೆ ಚಾಟನಿಂಗನನ್ನು ಬೈಯುತ್ತಿದ್ದರು. ಕೈಯಲ್ಲಿ ಕಮಂಡಲವೇನಾದರೂ ಇದ್ದಿದ್ದರೆ ಕ್ಷಣಾರ್ಧದಲ್ಲಿ ಅವನನ್ನು ಭಸ್ಮಮಾಡಿಬಿಡುತ್ತಿದ್ದರೇನೋ, ಆದರೆ ಕೇವಲ ಬಾಯಿ ಮತ್ತು ಆಗಾಗ್ಗೆ ಜರುಗಿ ಬೀಳುತ್ತಿದ್ದ ಶಾಲನ್ನು ಮತ್ತೆ ಸ್ವಸ್ಥಾನಕ್ಕೆ ಸೇರಿಸಲು ಕೈಯಿ – ಇವೆರಡೇ ಬಳಕೆಯಾಗುತ್ತಿದ್ದ ರಾಮಾಜೋಯಿಸರು ಸಕಲ ಅಂಗಾಂಗಗಳೂ ಉರಿದುಹೋಗುತ್ತಿದ್ದರೂ, ಅದೆಲ್ಲಕ್ಕೂ ಬೈಗುಳದ ರೂಪ ಕೊಡಲು ಸಾಧ್ಯವಾಗದೆ, ‘ಅಂಥಾ ಮುಂಡೇ ಮಗನೇ ಇಂಥಾ ಮುಂಡೇಮಗನೇ’ ಎಂದು, ಮುಂಡೇಮಗನೆ ಎಂಬ ಉತ್ತರ ಪದದೊಡನೆ ಇತರ ಕೆಲವು ಪದಗಳನ್ನು ಸೇರ್ಪಡೆ ಮಾಡುತ್ತಿದ್ದರು. ಮಂತ್ರಗಳೋಪಾದಿಯಲ್ಲಿ ಬರುತ್ತಿದ್ದ ಈ ಬೈಗುಳಗಳ್ಯಾವುವೂ ಚಾಟನಿಂಗನ ಆಸುಪಾಸಿಗೂ ಹೋಗದೆ ಬಭ್ರುವಾಹನನ ಮೇಲೆ ಪ್ರಯೋಗಿಸಿದ ಅರ್ಜುನನ ಬಾಣಗಳಂತೆ ಮಾರ್ಗಮಧ್ಯದಲ್ಲಿಯೇ ನಿಸ್ತೇಜವಾಗಿ ಬಿದ್ದು ಹೋಗುತ್ತಿದ್ದವು. ಚಾಟನಿಂಗನ ಪ್ರಚಂಡ ಭಂಡತನದೆದುರಿಗೆ ತನ್ನ ಬ್ರಹ್ಮತೇಜಸ್ಸು ಕವಡೆ ಕಿಮ್ಮತ್ತಿಲ್ಲದೆ ಬಿದ್ದು ಒದ್ದಾಡುವುದನ್ನು ಕಂಡ ಆ ಜೋಯಿಸರು ಅನೇಕ ಪ್ರಯತ್ನಗಳನ್ನು ಮಾಡಿಯೂ ತಮ್ಮ ಏಕತಾನದ ಬೈಗುಳುಗಳನ್ನು ಬದಲಿಸುವ ಮಾರ್ಗ ಕಾಣದೆ, ಕೃಷ್ಣನೆದುರಿಗೆ ಬಿಲ್ಲುಬಾಣಗಳನ್ನು ಬಿಸಾಕಿ ಕುಂತ ಅರ್ಜುನನಂತಾದರು.